Vijay Karnataka 1-9-18



## ರಾಜ್ಯ STATE

**ಕೆರೆ, ರಾಜಕಾಲುವೆ ಸಂಬಂಧದ ಎನ್‌ಜಿಟಿ ಆದೇಶ ಜಾರಿ ಅಸಾಧ್ಯ: ಪರಮೇಶ್ವರ್**

### ಯಲ್ಲಾಪುರ ತಾಲೂಕಿನ ಕಿರವತ್ತಿಯಲ್ಲಿ ಶ್ರೀ ಕೃಷ್ಣಾ ಮಿಲ್ಕ್ ನವೀಕೃತ ಘಟಕ ಉದ್ಘಾಟನೆ

# ಶ್ರದ್ಧೆ, ಧರ್ಮಾಚರಣೆಯಿಂದ ವಿಶೇಷ ಫಲ: ಡಾ.ಹೆಗ್ಗಡೆ

■ **ವಿಕ ಸುದ್ದಿಲೋಕ** ಯಲ್ಲಾಪುರ

ತಾಲೂಕಿನ ಕಿರವತ್ತಿಯಲ್ಲಿ ಶ್ರೀ ಕೃಷ್ಣಾ ಮಿಲ್ಕ್ಸ್ ಪ್ರೈ.ಲಿ.ನವರ ನವೀಕೃತ ಮತ್ತು ಆಧುನಿಕ ಎರಡನೇ ಹಂತದ ಕ್ಷೀರೋದ್ಯಮ ಘಟಕವನ್ನು ಧರ್ಮಸ್ಥಳದ ಧರ್ಮಾಧಿಕಾರಿ,ರಾಜರ್ಷಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರು ಶುಕ್ರವಾರ ಉದ್ಘಾಟಿಸಿದರು.

ಕೇಂದ್ರ ಸರಕಾರದ ಇಂಟಿಗ್ರೇಟೆಡ್ ಕೋಲ್ಡ್ ಚೈನ್ ಆ್ಯಂಡ್ ವ್ಯಾಲ್ಯೂ ಎಡಿಷನ್ ಇನ್ಫ್ರಾಸ್ಟ್ರಕ್ಚರ್ ಸ್ಕೀಮ್‌ನ ಫಲಾನುಭವಿ ಯೋಜನೆಯಾದ ಈ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಕೃಷ್ಣಾ ಸಂಸ್ಥೆಯ ಹಾಲು ಮತ್ತು ಹಾಲಿನ ಉತ್ಪನ್ನಗಳು ದೇಶದಲ್ಲಿ ಉತ್ತಮ ಹೆಸರು ಗಳಿಸಿವೆ. ಶ್ರದ್ಧೆ ಮತ್ತು ಧರ್ಮಾಚರಣೆಯಿಂದ ಮಾಡಿದ ಆರ್ಥಿಕ ಸಾಧನೆ ವಿಶೇಷ ಫಲ ಕೊಡುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀಕೃಷ್ಣಾ ಮಿಲ್ಕ್ ಸಂಸ್ಥೆಯ ಸಾಧನೆ ಪ್ರಶಂಸನೀಯವಾಗಿದೆ. ಈ ಉದ್ಯಮದಿಂದ ಸಾವಿರಾರು ಜನರಿಗೆ ಉದ್ಯೋಗಾವಕಾಶ ಲಭಿಸಿದ್ದು ಮಾತ್ರವಲ್ಲ,ಲಕ್ಷಾಂತರ ರೈತರಿಗೆ ಅನುಕೂಲವಾಗಿದೆ ಎಂದರು.



ಶ್ರೀಕೃಷ್ಣಾ ಮಿಲ್ಕ್ ಸಂಸ್ಥೆಯಿಂದ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಕಿರವತ್ತಿಯಲ್ಲಿ ಪ್ರಾರಂಭಿಸಲಾದ ಎರಡನೇ ಹಂತದ ಕ್ಷೀರೋದ್ಯಮ ಘಟಕವನ್ನು ಧರ್ಮಸ್ಥಳದ ಧರ್ಮಾಧಿಕಾರಿ, ರಾಜರ್ಷಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರು ಶುಕ್ರವಾರ ಉದ್ಘಾಟಿಸಿದರು.

ಪ್ರತಿ ತಿಂಗಳೂ ಮೂರು ಟನ್ ಶುದ್ಧ ತುಪ್ಪ ಈ ಸಂಸ್ಥೆಯಿಂದ ಧರ್ಮಸ್ಥಳ ಕ್ಷೇತ್ರಕ್ಕೆ ಪ್ರಸಾದ ತಯಾರಿಕೆಗೆ ಪೂರೈಕೆ ಯಾಗುತ್ತಿದೆ. ಇದು ಈ ಸಂಸ್ಥೆಯ ಉತ್ಪನ್ನಗಳ ಹಿರಿಮೆಗೆ ಸಾಕ್ಷಿಯಾಗಿದೆ. ಈ ಸಂಸ್ಥೆಯ ಪ್ರವರ್ತಕರ ಶಿಸ್ತು,ಸಾಧನೆ, ಗುರು ಭಕ್ತಿ, ವ್ಯಾವಹಾರಿಕ ಚತುರತೆ ಎಲ್ಲರಿಗೂ ಮಾದರಿ ಎಂದು ಹೇಳಿದರು.

ಸಂಸದ ನಳಿನ್‌ಕುಮಾರ್ ಕಟೀಲ್ ಅವರು ಸಿಹಿ ಉತ್ಪನ್ನ ಮಾರುಕಟ್ಟೆಗೆ ಬಿಡುಗಡೆಗೊಳಿಸಿ, ಶ್ರೀಕೃಷ್ಣಾ ಮಿಲ್ಕ್ ಸಂಸ್ಥೆಯ ಸಾಧನೆ ಇನ್ನಷ್ಟು ಎತ್ತರಕ್ಕೆ ಏರಲಿ. ಗ್ರಾಮಗಳ ಉತ್ಥಾನದಿಂದ ದೇಶದ ಉತ್ಥಾನ ಸಾಧ್ಯ ಎಂಬುದು ಪ್ರಧಾನಿ ಮೋದಿಯವರ ಕನಸಾಗಿದೆ ಎಂದರು. ಶಾಸಕ ಶಿವರಾಮ ಹೆಬ್ಬಾರ್ ಮಾತನಾಡಿದರು.

ಹುಬ್ಬಳ್ಳಿ-ಧಾರವಾಡ ಇಸ್ಕಾನ್ ಮುಖ್ಯಸ್ಥ ರಾಜೀವ ಲೋಚನ ದಾಸ್, ಆಕ್ಸಿಸ್ ಬ್ಯಾಂಕ್ ಹಿರಿಯ ಅಧಿಕಾರಿ ಬಿನೋದ್ ಚೌಧರಿ, ಸಂಸ್ಥೆಯ ಹನುಮಂತ ಪೈ, ಜಿ.ಎಸ್.ಕಾಮತ್, ದಿನೇಶ್ ಆರ್. ಪೈ , ಹ್ಯಾಂಗ್ಯೋ ಐಸ್ ಕ್ರೀಮ್ ಆಡಳಿತ ನಿರ್ದೇಶಕ ಪ್ರದೀಪ್ ಪೈ, ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಪೈ, ನಿರ್ದೇಶಕ ಸತೀಶ್ ಪೈ ಮುಂತಾದವರು ಭಾಗವಹಿಸಿದ್ದರು.

ವಿನಾಯಕ ಹುಲುಮನೆ, ಎ.ಪಿ.ಸಿಸ್ಕಾ, ಎನ್.ವಿ.ಜೋಶಿ,ಸೋಜಿ ಅಬ್ರಹಾಂ, ವಿಶ್ವನಾಥ ಉಡುಪ,ಸದಾನಂದ ನಾಯಕ,ಗಿರೀಶ ಹಾನುಭಾಗ,ವೈಭವ ಬರಾಡಿ,ಪ್ರಶಾಂತ ಪೈ ಮುಂತಾದವರನ್ನು ಸನ್ಮಾನಿಸಲಾಯಿತು.

ಗಣೇಶಪ್ರಸಾದ ಕಾಮತ್ ಸ್ವಾಗತಿಸಿದರು. ಆರ್.ಜಿ.ಹೆಗಡೆ, ಪ್ರಸನ್ನ ಪ್ರಭು ನಿರೂಪಿಸಿದರು.